ಸಂಖ್ಯೆ: ಆಕುಕ/62/ಸಿಜಿಎಂ/2020 (ಭಾಗ)

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 20.03.2020

**ಅಧಿಸೂಚನೆ**

ರಾಜ್ಯದಲ್ಲಿ ಕರೋನಾ ವೈರಸ್ ಸೋಂಕನ್ನು ನಿಯಂತ್ರಿಸುವ ನಿಟ್ಟಿನಲ್ಲಿ ದಿನಾಂಕ: 19.03.2020ರಂದು ನಡೆದ ರಾಜ್ಯ ಕಾರ್ಯಪಡೆಯ ತೀರ್ಮಾನದಂತೆ, ಸಂಬಂಧಪಟ್ಟ ಇಲಾಖೆಗಳು/ಪ್ರಾಧಿಕಾರಗಳು/ಸಂಸ್ಥೆಗಳು ಈ ಕೆಳಕಂಡ ಅಂಶಗಳಿಗೆ ಕೂಡಲೇ ಕ್ರಮವಹಿಸುವಂತೆ ಅಧಿಸೂಚಿಸಿದೆ:

1. ಹೊರದೇಶಗಳಿಂದ ಆಗಮಿಸುತ್ತಿರುವ ವ್ಯಕ್ತಿಗಳನ್ನು ಎ, ಬಿ ಮತ್ತು ಸಿ ವರ್ಗಗಳಲ್ಲಿ ವರ್ಗೀಕರಿಸುವುದು ಮತ್ತು ಸದರಿ ವರ್ಗೀಕರಣದಂತೆ ಅಂತಹ ವ್ಯಕ್ತಿಗಳ ಮೇಲೆ ಸೂಕ್ತ ಕ್ರಮವಹಿಸುವುದು. ಬಿ ವರ್ಗದ ವ್ಯಕ್ತಿಗಳಿಗೆ ಸರ್ಕಾರಿ ವೆಚ್ಚದಲ್ಲಿ ಹೋಟೆಲ್‌ಗಳಲ್ಲಿ ಇರಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು.

2. ಹೊರದೇಶಗಳಿಂದ ಬರುವ ರೋಗ ಲಕ್ಷಣವಿರದ (Asymptomatic) ವ್ಯಕ್ತಿಗಳ ಸ್ವಾಬ್ ಟೆಸ್ಟಿಂಗ್ ಮಾಡುವ ಕೆಲವು ಪ್ರಸ್ತಾವನೆಗಳು ಸ್ವೀಕೃತವಾಗಿವೆ. ಅಂತಹ ಪ್ರಸ್ತಾವನೆಗಳನ್ನು ಐಸಿಎಂಆರ್ ಗೆ ಅನುಮೋದನೆಗೆ ಕಳುಹಿಸಲು ಹಾಗೂ ಅಲ್ಲಿನ ಅನುಮೋದನೆ ದೊರೆತ ನಂತರ ಹೊರದೇಶಗಳಿಂದ ಆಗಮಿಸಿದ ಎಲ್ಲಾ ರೋಗ ಲಕ್ಷಣರಹಿತ ವ್ಯಕ್ತಿಗಳಿಗೆ ಸ್ವಾಬ್ ಟೆಸ್ಟಿಂಗ್ ಮಾಡಲು ಕ್ರಮ ತೆಗೆದುಕೊಳ್ಳತಕ್ಕದ್ದು.

3. ಪ್ರಸ್ತುತ, ಮನೆಗಳಲ್ಲಿ ಪ್ರತ್ಯೇಕವಾಗಿ ಇರಿಸಲಾದ (Home Quarantine) ವ್ಯಕ್ತಿಗಳನ್ನು ಆರೋಗ್ಯ ಸಹಾಯಕರುಗಳು ಪರೀಕ್ಷಿಸುತ್ತಿರುತ್ತಾರೆ. ಮನೆಗಳಲ್ಲಿ ಪ್ರತ್ಯೇಕವಾಗಿ ಇರಿಸಲಾದ ಅಂತಹ ವ್ಯಕ್ತಿಗಳ ಪರೀಕ್ಷೆಗೆ ಹೋಗುವ ಆರೋಗ್ಯ ಸಹಾಯಕರುಗಳ ಸಂಗಡ ಬೀಟ್ ಕಾನ್ಸ್‌ಟೇಬಲ್, ಗೃಹ ರಕ್ಷಕರೂ ಸಹ ಇರತಕ್ಕದ್ದು.

4. ಎಲ್ಲಾ ಜಿಲ್ಲಾ ಆಸ್ಪತ್ರೆಗಳು, ವೈದ್ಯಕೀಯ ಕಾಲೇಜು ಆಸ್ಪತ್ರೆ, ಸ್ವಾಯತ್ತ ಸಂಸ್ಥೆಗಳಿಗೆ ಸೇರುವ ಎಲ್ಲಾ ಆಸ್ಪತ್ರೆಗಳ ಸ್ವಚ್ಛತೆ ಮತ್ತು ಸೋಂಕು ನಿವಾರಕ ಪರಿಸರ ನಿರ್ಮಿಸಲು ಕ್ರಮ ತೆಗೆದುಕೊಳ್ಳುವಂತೆ ನಿರ್ಧರಿಸಲಾಗಿದ್ದು, ಪ್ರಸ್ತುತ ಆರೋಗ್ಯ ಸಹಾಯವಾಣಿ (104) ರಲ್ಲಿ ಬಹಳ ದೀರ್ಘವಾಗಿ ಕಾಯುವ ಪರಿಸ್ಥಿತಿ ಇರುವುದರಿಂದ ಹಿಂದುಜಾ ಮತ್ತು ಟಿಸಿಎಸ್ / NASSCOM ಕರೆ ಕೇಂದ್ರಗಳ ಸೌಲಭ್ಯ ಬಳಸಿಕೊಂಡ ನಂತರ 102 ಮತ್ತು ಸರ್ಕಾರದಲ್ಲಿರುವ ಇತರೆ ಕರೆ ಕೇಂದ್ರಗಳ ಸೌಲಭ್ಯಗಳನ್ನು ಆರೋಗ್ಯ ಇಲಾಖೆಯು ಉಪಯೋಗಿಸಿಕೊಳ್ಳತಕ್ಕದ್ದು.

5. ಮನೆಗಳಲ್ಲಿ ಪ್ರತ್ಯೇಕವಾಗಿ ಇರಿಸಲಾದ (Home Quarantine) ವ್ಯಕ್ತಿಗಳ ಚಲನವಲನಗಳನ್ನು ದೂರ ಸಂಪರ್ಕ ಸಂಸ್ಥೆಗಳ ಸಹಾಯದೊಂದಿಗೆ, ಇಲಾಖೆಯಲ್ಲಿ ಇರುವ ಸೌಲಭ್ಯವನ್ನು ಬಳಸಿಕೊಂಡು ಜಿಯೋ ಫೆನ್ಸಿಂಗ್ ಮುಖಾಂತರ ಗಮನಿಸತಕ್ಕದ್ದು.

----2

Scanned by CamScanner

6. ಸಾಮಾಜಿಕ ಅಂತರವನ್ನು ಪಾಲಿಸುವ ದೃಷ್ಟಿಯಲ್ಲಿ, ಜನ ಜಂಗುಳಿ ಸೇರದಂತೆ/ ಧಾರ್ಮಿಕ ಸಮಾವೇಶಗಳು ಸೇರದಂತೆ ಎಲ್ಲಾ ಧಾರ್ಮಿಕ ಸಂಸ್ಥೆಗಳ ಮುಖ್ಯಸ್ಥರು/ಸ್ವಾಮೀಜಿಗಳು ಅವರ ಅನುಯಾಯಿಗಳಿಗೆ/ ಯಾತ್ರಾರ್ಥಿಗಳಿಗೆ ಕಡ್ಡಾಯವಾಗಿ ಮನವಿ ಮಾಡುವಂತೆ ಮುಜರಾಯಿ ಮತ್ತು ವಕ್ಫ್ ಇಲಾಖೆಗಳ ಮುಖಾಂತರ ಧಾರ್ಮಿಕ ಮುಖಂಡರುಗಳಿಗೆ ತಿಳಿಸತಕ್ಕದ್ದು.

7. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು, 10,000 ಕಾರ್ಯಕರ್ತರನ್ನು ತರಬೇತಿಗೊಳಿಸಿ ಮತ್ತು ಸಿದ್ಧಪಡಿಸುವ ಪ್ರಸ್ತಾವನೆಯನ್ನು ಕಾರ್ಯಪಡೆಯು ಒಪ್ಪಿದ್ದು, ಅದಕ್ಕೆ ಬೇಕಾದ ಬೇಡಿಕೆಗಳ ಬಗ್ಗೆ ಮುಂದಿನ ಸಭೆಯಲ್ಲಿ ತಪ್ಪದೇ ಮಂಡಿಸತಕ್ಕದ್ದು.

8. ಜಾತ್ರೆಗಳು/ಸಂತೆಗಳಿಗೆ ಬಹಳಷ್ಟು ಜನ ಸೇರದಂತೆ ನಿರ್ಬಂಧಿಸಲು ಮತ್ತು ಅದನ್ನು ಸಂಬಂಧಿಸಿದ ಪ್ರಾಧಿಕಾರಗಳು/ ಅಧಿಕಾರಿಗಳು ಕಡ್ಡಾಯವಾಗಿ ಜಾರಿಗೊಳಿಸತಕ್ಕದ್ದು.

9. ಓಲಾ, ಊಬರ್ ಮತ್ತು ಇತರೆ ಸಂಸ್ಥೆಗಳಿಗೆ ನೈರ್ಮಲ್ಯ, ಸ್ವಚ್ಛತೆ ಹಾಗೂ ವೈಯಕ್ತಿಕ ಸ್ವಚ್ಛತೆ ಕಾಪಾಡುವ ಕುರಿತು ಎಲ್ಲಾ ಟ್ಯಾಕ್ಸಿ ಆಪರೇಟರ್‌ಗಳಿಗೆ ಸಾರಿಗೆ ಇಲಾಖೆಯಿಂದ ನಿರ್ದೇಶನ ಹೊರಡಿಸತಕ್ಕದ್ದು.

10. ಭಾರತ ಸರ್ಕಾರವು ಯಾವುದೇ ಅಂತಾರಾಷ್ಟ್ರೀಯ ಯಾತ್ರಿಗಳಿಗೆ ದೇಶದ ಒಳಗೆ ಬರದಂತೆ ನಿರ್ಬಂಧ ವಿಧಿಸಿದಲ್ಲಿ ಅದರಂತೆ ಕ್ರಮ ಕೈಗೊಳ್ಳತಕ್ಕದ್ದು.

11. ಎಲ್ಲಾ ಜಿಲ್ಲಾ ಆಸ್ಪತ್ರೆಗಳು ಹಾಗೂ ವೈದ್ಯಕೀಯ ಕಾಲೇಜುಗಳನ್ನು Sanitize ಮಾಡಲು ಕ್ರಮ ವಹಿಸುವುದು.

ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರನ್ನು, ಮುಖಗವಸು, ಕೃತಕ ಉಸಿರಾಟ ವ್ಯವಸ್ಥೆ, ಕೈ ಸ್ವಚ್ಛಗೊಳಿಸುವ ದ್ರಾವಣ (**Hand Sanitizer**) ಮತ್ತು ಇತರೆ ನೈರ್ಮಲ್ಯ ಉಪಕರಣಗಳನ್ನು ಖರೀದಿಸಿ ಒದಗಿಸುವ ಜವಾಬ್ದಾರಿಯನ್ನು ನಿರ್ವಹಿಸಲು ನೋಡಲ್ ಅಧಿಕಾರಿಯನ್ನಾಗಿ ಈ ಮೂಲಕ ನೇಮಿಸಲಾಗಿದೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಇವರನ್ನು, ತುರ್ತು ಪರಿಸ್ಥಿತಿ ನಿರ್ವಹಣಾ ವ್ಯವಸ್ಥೆಯನ್ನು ತಯಾರಿಸಲು ಮತ್ತು ಕೊರೊನಾ ವೈರಸ್ ಸೋಂಕು ಹರಡದಂತೆ ಅದನ್ನು ನಿಯಂತ್ರಿಸುವ ಹಾಗೂ ಖಾಯಿಲೆಯನ್ನು ನಿಯಂತ್ರಿಸುವ ಮತ್ತು ರೋಗಿಗಳ ವೈದ್ಯಕೀಯ ನಿರ್ವಹಣೆ ಕುರಿತು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ನೋಡಲ್ ಅಧಿಕಾರಿಯನ್ನಾಗಿ ಈ ಮೂಲಕ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜಾವೇದ್ ಅಖ್ತರ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಇವರಿಗೆ:

1) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು
2) ಎಲ್ಲಾ ಜಿಲ್ಲಾಧಿಕಾರಿಗಳು
3) ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳು

----3

Scanned by CamScanner

4) ಎಲ್ಲಾ ಇಲಾಖಾ ಮುಖ್ಯಸ್ಥರುಗಳು
5) ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ, ಬೆಂಗಳೂರು
6) ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು
7) ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು
8) ಪೊಲೀಸ್ ಆಯುಕ್ತರು, ಬೆಂಗಳೂರು, ಮೈಸೂರು, ಹುಬ್ಬಳ್ಳಿ ಮತ್ತು ಮಂಗಳೂರು
9) ರಿಜಿಸ್ಟ್ರಾರ್ ಜನರಲ್, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು (ಒಂದು ಪ್ರತ್ಯೇಕ ಕೋರಿಕೆ ಪತ್ರದೊಂದಿಗೆ)
10) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
11) ವ್ಯವಸ್ಥಾಪಕ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು
12) ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
13) ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಶಾಂತಿನಗರ, ಬೆಂಗಳೂರು
14) ಎಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು
15) ಎಲ್ಲಾ ಜಿಲ್ಲಾ ಶಸ್ತ್ರಚಿಕಿತ್ಸಕರು
16) ವೈದ್ಯಕೀಯ ಶಿಕ್ಷಣ ಇಲಾಖೆಯ ಎಲ್ಲಾ ಸ್ವಾಯತ್ತ ಸಂಸ್ಥೆಗಳ ಡೀನ್ ಮತ್ತು ಡೈರೆಕ್ಟರ್‌ಗಳು
17) ಎಲ್ಲಾ ಪ್ರಮುಖ ಆಸ್ಪತ್ರೆಗಳ ಹಾಗೂ ಜಿಲ್ಲಾ ಆಸ್ಪತ್ರೆಗಳ ವೈದ್ಯಕೀಯ ಅಧೀಕ್ಷಕರು

ಪ್ರತಿಗಳನ್ನು:

1) ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು
2) ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು
3) ಮಾನ್ಯ ಉಪ ಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ, ಮಾತಂ ಮತ್ತು ಜೈತಂ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇವರ ಆಪ್ತ ಕಾರ್ಯದರ್ಶಿ
4) ಮಾನ್ಯ ಗೃಹ ಸಚಿವರ ಆಪ್ತ ಕಾರ್ಯದರ್ಶಿ
5) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ
6) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ
7) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ

Scanned by CamScanner